Kannada Prabha 01/09/2017 Page 11

# ಕೂಡಗಿ ಸ್ಥಾವರದಲ್ಲಿ ಗೋಲ್‌ಮಾಲ್: ಸಿಬಿಐ ಕೇಸು

## ಮೂವರು ಉನ್ನತ ಅಧಿಕಾರಿಗಳು, ಒಂದು ಗುತ್ತಿಗೆದಾರ ಕಂಪನಿ ವಿರುದ್ಧ ಎಫ್‌ಐಆರ್ ದಾಖಲು

## ಉಷ್ಣವಿದ್ಯುತ್ ಯೋಜನೆಗೆ ನೆಲ ಸಮತಟ್ಟುಗೊಳಿಸಿ, ಮೂಲಸೌಕರ್ಯ ಕಲ್ಪಿಸುವಲ್ಲಿ ಅವ್ಯವಹಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಜಯಪುರದ ಕೂಡಗಿ ಉಷ್ಣವಿದ್ಯುತ್ ಯೋಜನೆಗೆ (ಎಸ್‌ಟಿಪಿಪಿ) ಸಂಬಂಧಪಟ್ಟಂತೆ ಸ್ಥಾವರ ಪ್ರದೇಶದ ಭೂಮಿಯನ್ನು ಸಮತಟ್ಟುಗೊಳಿಸುವಲ್ಲಿ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಪ್ಯಾಕೇಜ್‌ನಲ್ಲಿ ಅವ್ಯವಹಾರ ನಡೆಸಿದ ಆರೋಪದ ಮೇಲೆ ಕೇಂದ್ರದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮದ (ಎನ್‌ಟಿಪಿಸಿ) ಅಧಿಕಾರಿಗಳು ಮತ್ತು ಗುತ್ತಿಗೆದಾರ ಕಂಪನಿ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ಎನ್‌ಟಿಪಿಸಿಯ ಹಿರಿಯ ವ್ಯವಸ್ಥಾಪಕ (ಸಿವಿಲ್) ಎಂ.ವಿ. ಪದ್ಮಕುಮಾರ್ ಮೊದಲ ಆರೋಪಿಯಾಗಿದ್ದು, ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕ ಎಸ್.ಎಸ್.ನಾಥನ್ ಎರಡನೇ ಆರೋಪಿ, ಪ್ರಸ್ತುತ ಹಿಮಾಚಲ ಪ್ರದೇಶದಲ್ಲಿ ಪ್ರಧಾನ ವ್ಯವಸ್ಥಾಪಕರಾಗಿರುವ (ಯೋಜನೆ) ವಿ.ಕೆ.ಪ್ರಧಾನ್ ಮೂರನೇ ಆರೋಪಿ ಮತ್ತು ಹೈದರಾಬಾದ್‌ನ ಶ್ರೀ ಅವಂತಿಕಾ ಕಂಟ್ರಾಕ್ಟರ್ ಸಂಸ್ಥೆಯನ್ನು (ಎಸ್‌ಎಸಿಐಎಲ್) ನಾಲ್ಕನೇ ಆರೋಪಿಯನ್ನಾಗಿ ಮಾಡಲಾಗಿದೆ.

2012ರಲ್ಲಿ ಈ ಅವ್ಯವಹಾರ ನಡೆದಿದ್ದು, ಆ ವೇಳೆ ಅಧಿಕಾರಿಗಳು ಕೂಡಗಿ ಉಷ್ಣ ವಿದ್ಯುತ್ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ₹154.36 ಕೋಟಿ ವೆಚ್ಚದಲ್ಲಿ ಸ್ಥಾವರ ಪ್ರದೇಶದ ಭೂಮಿಯನ್ನು ಸಮತಟ್ಟುಗೊಳಿಸಿ, ಮೂಲಸೌಕರ್ಯ ಕಲ್ಪಿಸಬೇಕಾಗಿದ್ದು, 30 ತಿಂಗಳ ಕಾಲಾವಕಾಶ ನೀಡಲಾಗಿತ್ತು. ಆದರೆ, ಸಂಸ್ಥೆಯು ತನ್ನ ಕಾರ್ಯಕ್ಷಮತೆ ತೋರಿಸಲು ವಿಫಲವಾಯಿತು. ಗುತ್ತಿಗೆದಾರ ಸಂಸ್ಥೆಗೆ ಲಾಭ ಮಾಡಿಕೊಡುವ ಉದ್ದೇಶದಿಂದ ಅಧಿಕಾರಿಗಳು ಎನ್‌ಟಿಪಿಸಿಗೆ ನಷ್ಟವನ್ನುಂಟು ಮಾಡಿರುವುದು ವರದಿಯಿಂದ ಗೊತ್ತಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

**ಒಟ್ಟು 150 ಕೋಟಿ ರು. ಅಕ್ರಮ ನಡೆದಿರುವ ಸಾಧ್ಯತೆ**

ಆರೋಪಿ ಎಸ್.ಎಸ್.ನಾಥನ್ ಅವರು ಸಂಸ್ಥೆಯ ಕಾಮಗಾರಿಗಳನ್ನು ಪರಿಶೀಲನೆ ನಡೆಸದೆ ಲೆಕ್ಕಾಚಾರದ ಬಿಲ್‌ಗಳನ್ನು ತಪ್ಪಾಗಿ ಪ್ರಮಾಣೀಕರಿಸಿದ್ದಾರೆ. ಅಲ್ಲದೇ, ಗುತ್ತಿಗೆದಾರರಿಗೆ ಅಧಿಕ ಮೊತ್ತ ಲಭ್ಯವಾಗುವಂತೆ ಬೆಂಬಲವಾಗಿ ನಿಂತಿದ್ದರು. ತಾಂತ್ರಿಕ ಅನುಮತಿ ಪಡೆಯಬೇಕು ಎಂಬ ನಿಯಮವಿದ್ದರೂ ಅದನ್ನು ಉಲ್ಲಂಘನೆ ಮಾಡಲಾಗಿದೆ. ಗುಣಮಟ್ಟದ ಪರೀಕ್ಷೆಯನ್ನು ಸಹ ಮಾಡಲಾಗಿಲ್ಲ. ಅಲ್ಲದೇ, ಪದ್ಮಕುಮಾರ್, ವಿ.ಕೆ.ಪ್ರಧಾನ್ ಅವರು ಸಹ ಗುತ್ತಿಗೆದಾರ ಸಂಸ್ಥೆಗೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರದಿಂದ ಅಧಿಕ ಹಣ ಸಲ್ಲಿಕೆಯಾಗುವಂತೆ ಮಾಡಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

**ಖಾಸಗಿ ವ್ಯಕ್ತಿಗಳ ವಿರುದ್ಧ ಎಫ್‌ಐಆರ್:** ಮತ್ತೊಂದು ಪ್ರಕರಣದಲ್ಲಿ ಆದಾಯ ತೆರಿಗೆ ಸಂಬಂಧ ಅಕ್ರಮ ಎಸಗಲು ಪ್ರಯತ್ನಿಸಿದ ಆರೋಪದ ಮೇಲೆ ದೆಹಲಿಯ ಇಬ್ಬರು ಖಾಸಗಿ ವ್ಯಕ್ತಿಗಳ ವಿರುದ್ಧ ಸಿಬಿಐ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಸತೀಶ್ ಚಂದ್ ಶರ್ಮಾ ಮತ್ತು ಉದ್ಯಮಿ ಕೃಷ್ಣ ಚೌರಾಸಿಯಾ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

ಉದ್ಯಮಿ ಕೃಷ್ಣ ಚೌರಾಸಿಯಾ ಅವರು ಶಾಂತಿ ಪಾನ್ ಮಸಾಲ ಪ್ರೈ.ಲಿ., ಎಸ್.ಎಸ್.ಎಸ್ಸೆನ್ಸ್ ಪ್ರೈ.ಲಿ., ಎಸ್‌ಎಂಟಿ ಟೊಬಾಕೋ ಮತ್ತು ಎಸ್.ಎಂ.ಫರ್‌ಫ್ಯೂಮ್ ಪ್ರೈ.ಲಿ. ಸಂಸ್ಥೆಗಳ ಮಾಲೀಕರಾಗಿದ್ದಾರೆ. ಬೆಂಗಳೂರು, ಕೊಲ್ಕತ್ತಾ, ಮುಂಬೈ ಮತ್ತು ಚೆನ್ನೈನಲ್ಲಿ ಶಾಖೆಗಳನ್ನು ಹೊಂದಿದ್ದಾರೆ. ಸರಿಯಾದ ಆದಾಯ ತೆರಿಗೆ ಪಾವತಿಸದ ಹಿನ್ನೆಲೆಯಲ್ಲಿ ಕೆಲವೊಂದು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಸತೀಶ್ ಚಂದ್ ಶರ್ಮಾ ಆದಾಯ ತೆರಿಗೆ ಇಲಾಖೆಯ ಉನ್ನತ ಅಧಿಕಾರಿಗಳ ಪರಿಚಯ ಇದ್ದು, ಸಮಸ್ಯೆಗಳನ್ನು ಬಗೆಹರಿಸಿ ಕೊಡುವ ಬಗ್ಗೆ ಕೃಷ್ಣ ಚೌರಾಸಿಯಾ ಅವರಿಗೆ ಹೇಳಿದ್ದು, ಇದಕ್ಕಾಗಿ ಲಂಚ ನೀಡಬೇಕು ಎಂದು ಬೇಡಿಕೆ ಇಟ್ಟಿದ್ದ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ. ಸತೀಶ್ ಚಂದ್ ಶರ್ಮಾ ಆ.2ರಂದು ಕೊಲ್ಕತ್ತಾ, ಆ.16ರಂದು ಚೆನ್ನೈ ಮತ್ತು ಆ.17ರಂದು ಮುಂಬೈಗೆ ಭೇಟಿ ನೀಡಿದ್ದು, ಪ್ರತಿ ಸ್ಥಳದಲ್ಲಿ ತಲಾ ₹30 ಲಕ್ಷದಂತೆ ಪಡೆದು ಆದಾಯ ತೆರಿಗೆ ಸಮಸ್ಯೆ ಬಗೆಹರಿಸುವ ಪ್ರಯತ್ನ ನಡೆಸಿದ್ದ. ಆ.30ರಂದು ಬೆಂಗಳೂರಿಗೆ ಆಗಮಿಸಿದ ಸತೀಶ್ ಚಂದ್ ಶರ್ಮಾ, ನಗರದ 37ನೇ ಕ್ರೆಸೆಂಟ್ ಹೊಟೇಲ್‌ನಲ್ಲಿ ತಂಗಿದ್ದ. ಈ ವೇಳೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಲಂಚ ನೀಡಬೇಕಾಗಿದ್ದು, ₹35 ಲಕ್ಷ ತಂದು ಕೊಡುವಂತೆ ಕೃಷ್ಣ ಚೌರಾಸಿಯಾಗೆ ಸೂಚಿಸಿದ್ದ. ಈ ಮಾಹಿತಿ ಪಡೆದು ಸ್ಥಳಕ್ಕೆ ಭೇಟಿ ನೀಡಿ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

Udayavani 01/09/2017 Page 02



ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ಸೇವೆ ಕಾಯಂಗೆ ಆಗ್ರಹಿಸಿ ಫ್ರೀಡಂಪಾರ್ಕ್‌ನಲ್ಲಿ ನಡೆಸುತ್ತಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಹೋರಾಟಗಾರ್ತಿ ಲಕ್ಷ್ಮಿ.